# ಎಲೆಕ್ಷನ್ ಪ್ರಚಾರ ಭರಾಟೆ

ನನ್ನ ಯೋಚನಾ ಧಾಟಿ ನನ್ನನ್ನೇ ಬೆಚ್ಚುವಂತೆ ಮಾಡಿತು. ವಿಶ್ವಾಸನ ಮೇಲೆ ಪ್ರೀತಿಯಿದೆ. ಆದರೆ ಅವನೊಂದಿಗೇ ಬದುಕಬೇಕು ಎಂದೇನೂ ಇಲ್ಲ.. ವಿಶ್ವಾಸನ ಮೇಲೆ ಪ್ರೀತಿ ಮೂಡುವ ಮೊದಲೇ ವಿಕ್ರಮನನ್ನು ಬಿಟ್ಟು ಹೋಗುವ ನಿರ್ಧಾರ ಮಾಡಿಯಾಗಿತ್ತು..

ಧೈರ್ಯವಿಲ್ಲದ್ದಕ್ಕೆ, ತಕ್ಷಣ ಬೆಂಬಲಕ್ಕೆ ವಿಶ್ವಾಸನ ಮೊರೆ ಹೋಗುವುದು ನಂತರ ನಿಧಾನವಾಗಿ ಅವನಿಗೆ ತಿಳಿ ಹೇಳಿ, ಪ್ರೀತಿ, ಪ್ರೇಮಕ್ಕಿಂಥ ಬದುಕು ದೊಡ್ಡದು ಎಂಬ ಅರಿವು ಹೇಳಿ ಅವನಿಂದ ದೂರವಾಗಬೇಕು.

ಚಿಕ್ಕ ಹುಡುಗ ಅವನು. ಅವನ ವಯಸ್ಸಿಗೆ ತಕ್ಕವಳನ್ನು ಮದುವೆಯಾಗಿ, ಸಂಸಾರ ಮಾಡಿಕೊಂಡು, ಮಕ್ಕಳು ಮರಿ ಮಾಡಿಕೊಂಡು ಚೆನ್ನಾಗಿರಬೇಕು.

